

ರಕ್ತವಿಹೀನ ಬಲಿಯ ಮೂಲಕ ಪ್ರಸಿದ್ಧವಾಗಿರುವ ಮುಂಡೇಶ್ವರಿ ದೇವಿಯ ಮಂದಿರ

# ಸಾವಿಲ್ಲ, ರಕ್ತವಿಲ್ಲ ಆದರೂ ಬಲಿ!

ಬಿಹಾರದ ಮುಂಡೇಶ್ವರಿ ದೇವಿಗೆ ಬಲಿ ನೀಡಲಾಗುತ್ತದೆ. ಆದರೆ, ಬಲಿಯಾಗುವ ಪ್ರಾಣಿ ಸಾಯುವುದಿಲ್ಲ, ಆದರ ದೇಹದಿಂದ ಒಂದು ಹನಿ ರಕ್ತವೂ ತೊಟ್ಟಿಕ್ಕುವುದಿಲ್ಲ!

■ ನಾಗ ಎಚ್. ಹುಬ್ಳಿ

ದೇಶದ ವಿವಿಧ ಸ್ಥಳಗಳಲ್ಲಿರುವ ದೇವಿ ಮಂದಿರಗಳಲ್ಲಿ ಪ್ರಾಣಿಗಳನ್ನು ಬಲಿನೀಡುವ ಸಂಪ್ರದಾಯವಿದೆ. ಕೆಲವೆಡೆ ಸ್ವಲ್ಪ ರಕ್ತವನ್ನಾದರೂ ದೇವಿಯ ವಿಗ್ರಹದ ಮೇಲೆ ಸಿಂಪಡಿಸುವ ಮೂಲಕ ಬಲಿ ಆಚರಣೆಯನ್ನು ನೆರವೇರಿಸಲಾಗುತ್ತದೆ. ಆದರೆ ಈ ಸಂಪ್ರದಾಯಕ್ಕೆ ವಿರುದ್ಧವಾಗಿ, ರಕ್ತವನ್ನೇ ಚೆಲ್ಲದ ರೀತಿಯಲ್ಲಿ ಬಲಿ ನೀಡುವ ಸಂಪ್ರದಾಯವೊಂದನ್ನು ದೇವಾಲಯವೊಂದು ಹಲವಾರು ವರ್ಷಗಳಿಂದ ಪಾಲಿಸಿಕೊಂಡು ಬರುತ್ತಿದೆ. ಇಂತಹ ವಿಶಿಷ್ಟ ದೇವಾಲಯವಿರುವುದು ಬಿಹಾರ ರಾಜ್ಯದ ಕೈಮೂರ್ ಜಿಲ್ಲೆಯಲ್ಲಿ.

ಕೈಮೂರ್ ಜಿಲ್ಲೆಯ ಭಗವಾನ್‌ಪುರದ (ಕೌರಾದ) ಬೆಟ್ಟದ (ಈ ಬೆಟ್ಟವನ್ನು 'ಮುಂಡೇಶ್ವರಿ ಬೆಟ್ಟ' ಎಂದು ಕರೆಯಲಾಗುತ್ತದೆ) ಮೇಲಿರುವ ಮುಂಡೇಶ್ವರಿ ದೇವಾಲಯದಲ್ಲಿ ಇಂತಹದೊಂದು ವಿಭಿನ್ನ ಆಚರಣೆಯನ್ನು ಕಾಣಬಹುದು. ಇತರ ದೇವಿ ಮಂದಿರಗಳಲ್ಲಿ ನೀಡಲಾಗುವಂತೆ ಇಲ್ಲಿಯೂ ಕೂಡ ಕುರಿಯನ್ನು ದೇವರಿಗೆ ಬಲಿ ನೀಡಲಾಗುತ್ತದೆ. ಆದರೆ, ಒಂದು ಹನಿ ರಕ್ತವೂ ಆ ಕುರಿಯ ದೇಹದಿಂದ ಹೊರಬರುವುದಕ್ಕೆ ಅವಕಾಶ ನೀಡಲಾಗುವುದಿಲ್ಲ